# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಮೇ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 05 ಪ್ರಕಟಣೆ : 26-05-2025


## ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ



ದಿನಾಂಕ **11-05-2025**ನೇ ಭಾನುವಾರ ಶಾಂಕರತತ್ವ ಪ್ರಸಾರ ಅಭಿಯಾನ, ಶ್ರೀ ಸುಬ್ರಹ್ಮಣ್ಯ ಸಭಾ ಮತ್ತು ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಸಂಜಯ ಕಾರಂತರು, ಶ್ರೀ ವರದರಾಜ ನಾಗ್ವೇಕರ್ ಮತ್ತು ಶ್ರೀ ಸದಾಶಿವ ಶಾಸ್ತ್ರಿಗಳ ನೇತೃತ್ವದಲ್ಲಿ ಗಣಹೋಮ, ಶ್ರೀ ಸತ್ಯನಾರಾಯಣ ಪೂಜೆ ಮತ್ತು ರುದ್ರಪಠನ ಮತ್ತು ರುದ್ರಾಭಿಷೇಕ ಆಯೋಜಿಸಲಾಗಿತ್ತು. ಮುನ್ನೂರಕ್ಕೂ ಅಧಿಕ ಭಕ್ತರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ವೇದಾಂತಭಾರತೀಯ ಸದಸ್ಯರು ಶಾಂಕರಸ್ತೋತ್ರಗಳ ಪಠನ ಮಾಡಿದರು. ಮಕ್ಕಳಿಂದ ಬಾಲಶಂಕರ ರೂಪಧಾರಣೆ ಮಾಡಿಸಬೇಕೆಂಬ ಶೃಂಗೇರಿ ಜಗದ್ಗುರುಗಳ ಆದೇಶದಂತೆ, ಮೂವತ್ತಕ್ಕೂ ಹೆಚ್ಚು ಮಕ್ಕಳು ಬಾಲಶಂಕರ ರೂಪಧರಿಸಿ ವೇದಿಕೆಯಲ್ಲಿ ಮಿಂಚಿದರು. ಅದರೊಂದಿಗೆ ಶಂಕರರಿಗೆ ಸಂಬಂಧಿಸಿದ ಅನೇಕ ರೂಪಕಗಳು ಪ್ರದರ್ಶನ ಗೊಂಡುವು. ಮಧ್ಯಾಹ್ನ ಡಾ. ಶಿಕಾರಿಪುರ ಕೃಷ್ಣಮೂರ್ತಿ ಮತ್ತು ವಿದ್ವಾನ್ ದಿವಾಣ ಕೇಶವ ಭಟ್ ಇವರ ನೇತೃತ್ವದಲ್ಲಿ 'ಶಂಕರ ಚರಿತಂ' ಎಂಬ ರೂಪಕವು ಶ್ರೀ ಸದ್ಬೋಧ ಗುರುಕುಲದ ಸದಸ್ಯರಿಂದ ಹಾಗೂ ಮತ್ತೆ ನಡೆದ ಶಾಂಕರತತ್ವ ಮತ್ತು ಷಡ್ದರ್ಶನ ವಿಚಾರಗೋಷ್ಠಿಯು ಮಂಗಳೂರಿನ ವಿವಿಧ ವಿದ್ವಾಂಸರುಗಳ ಭಾಗವಹಿಸುವಿಕೆಯೊಂದಿಗೆ ನಡೆಯಿತು.

ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಉದಯಕುಮಾರ್, ಶಾಂಕರತತ್ವ ಪ್ರಸಾರ ಅಭಿಯಾನದ ಶ್ರೀ ಕರುಣ್ ರಾವ್ ಬೆಳ್ಳೆಯವರು ಇದರ ನೇತೃತ್ವ ವಹಿಸಿದ್ದು, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಜಯಂತಿ ವಿನೋದ್ ರಾವ್ ಪ್ರಸಾದನ ಖರ್ಚು, ಯುವ ವೇದಿಕೆ ಅಧ್ಯಕ್ಷ ಶ್ರೀ ಜನಕರಾಜ್ ಬಹುಮಾನವನ್ನು, ಶ್ರೀ ಶ್ರೀಧರ ಶಾಸ್ತ್ರಿಗಳು ಪ್ರೋತ್ಸಾಹ ನಗದು ಬಹುಮಾನ ಬಾಲಶಂಕರ ಇವರಿಗೆ ನೀಡಿದರು.

ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು







## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ

ಕಾಸರಗೋಡಿನ ಶ್ರೀ ಶುಭಕರ್ ಶಾನುಭಾಗ್ ಮತ್ತವರ ಪತ್ನಿ ಶ್ರೀಮತಿ ರಾಜೇಶ್ವರಿಯವರ **60**ನೇ ವಿವಾಹ ವಾರ್ಷಿಕೋತ್ಸವ ಪ್ರಯುಕ್ತ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ₹ **1,00,000/-** (ರೂಪ್ಾಯ ಒಂದು ಲಕ್ಷ) ದೇಣಿಗೆ ನೀಡಿರುತ್ತಾರೆ. ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನಡೆದ ಶ್ರೀ ಶಂಕರ ಜಯಂತಿಯ ಆಚರಣೆಯ ಶುಭ ಸಂದರ್ಭದಲ್ಲಿ ದೇಣಿಗೆಯ ಚೆಕ್‌ನ್ನು ಶ್ರೀ ಸಭಾದ ಅಧ್ಯಕ್ಷ ಡಾ. ಎ. ಪಿ. ಕೃಷ್ಣರಿಗೆ ನೀಡಿದರು. ಶ್ರೀಮತಿ ರಾಜೇಶ್ವರಿಯವರು ಇದಕ್ಕೆ ಮೊದಲು ತನ್ನ ಸಹೋದರ ಶ್ರೀ ಜಯರಾಮ್ ಇವರ ಜತೆಯಲ್ಲಿ ಒಂದು ಲಕ್ಷ ದೇಣಿಗೆಯನ್ನು ನೀಡಿರುತ್ತಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು



ನವೀಮುಂಬೈಯ ನೆರುಲ್ ನಿವಾಸಿ ಶ್ರೀಮತಿ ಆಶಾ ರತನ್ ಕುಮಾರ್ ತನ್ನ ಮಾತಾಪಿತರಾದ **'ಶ್ರೀ ಬಜೆ ಗಂಗಾಧರ ಶಾನುಭಾಗ್ ಮತ್ತು ಶ್ರೀಮತಿ ಹೇಮಲತಾ ಜಿ. ಶಾನುಭಾಗ್ ಇವರ ಸ್ಮರಣಾರ್ಥ'** ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ **1,00,500/-** (ರೂಪ್ಾಯ ಒಂದು ಲಕ್ಷದ ಐನೂರು) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 : 9343361618 e-mail : jnanashakthisss@gmail.com


# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಸುರತ್ಕಲ್



ದಿನಾಂಕ 11–05–2025ನೇ ರವಿವಾರ ನಮ್ಮ ಸಂಘದ ವತಿಯಿಂದ 'ಶ್ರೀ ಶಂಕರ ಜಯಂತಿ'ಯನ್ನು ಸಂಘದ ಗೌರವಾಧ್ಯಕ್ಷರಾದ ಮಲ್ಲಮಾರು ಶ್ರೀ ಭವಾನಿಶಂಕರ ರಾಯರ ಮನೆಯಲ್ಲಿ ಸಂಜೆ ಗಂಟೆ 5–00ಕ್ಕೆ ಆಚರಿಸಲಾಯಿತು. ಶ್ರೀ ದಯಾನಂದ ರಾವ್ ಎಜುಕೇಶನ್ ಟ್ರಸ್ಟ್, ಬೆಂಗಳೂರು ಇದರ ವತಿಯಿಂದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಪೆನ್‌ಡ್ರೈವ್, ಪುಸ್ತಕ, ಬ್ಯಾಗ್ ಇತ್ಯಾದಿಗಳನ್ನು ವಿತರಿಸಲಾಯಿತು. ಉನ್ನತ ಶಿಕ್ಷಣ ವ್ಯಾಸಂಗದಲ್ಲಿರುವ ಹಾಗೂ ಆರ್ಥಿಕವಾಗಿ ಹಿಂದುಳಿದ ಒಂದು ವಿದ್ಯಾರ್ಥಿನಿಗೆ ಲ್ಯಾಪ್‌ಟಾಪ್, ಪುಸ್ತಕ, ಪೆನ್‌ಡ್ರೈವ್ ಹಾಗೂ ಬ್ಯಾಗನ್ನು, ಉನ್ನತ ಶಿಕ್ಷಣದ ನಾಲ್ಕು ವಿದ್ಯಾರ್ಥಿಗಳಿಗೆ, ರೂ. 25,000/–ರಂತೆ ವಿಶೇಷ ವಿದ್ಯಾರ್ಥಿವೇತನವನ್ನು, ಪದವಿ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ, ಬ್ಯಾಗ್, ಪೆನ್‌ಡ್ರೈವ್ ಇತ್ಯಾದಿಗಳನ್ನು ವಿತರಿಸಲಾಗಿದ್ದು, ಒಟ್ಟು 16 ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದಿರುತ್ತಾರೆ. ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್, ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗ್ ಹಾಗೂ ಶ್ರೀಮತಿ ಪರಿಮಳ ಪ್ರಶಾಂತ್, ಕಾರ್ಯದರ್ಶಿಗಳಾದ ಶ್ರೀ ಫಾಲಚಂದ್ರ ಶರ್ಮ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಸುನಿತಾ ಶ್ರೀಕಾಂತ್ ಹಾಗೂ ಸಂಘದ ಪದಾಧಿಕಾರಿಗಳು, ಯುವ ಹಾಗೂ ಮಹಿಳಾ ವೇದಿಕೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

ಬಳಿಕ ಶ್ರೀ ಸಿ. ಎಚ್. ಕೃಷ್ಣ ಭಟ್ ಹೆಜಮಾಡಿ ಇವರ ನೇತೃತ್ವದಲ್ಲಿ ಶಂಕರ ಜಯಂತಿಯನ್ನು ಆಚರಿಸಿ, ಆಚರಣೆಯ ಮಹತ್ವ ಹಾಗೂ ಶ್ರೀ ಶಂಕರಾಚಾರ್ಯರ ಬಗ್ಗೆ ಸೂಕ್ತ ಮಾಹಿತಿಗಳನ್ನು ಶ್ರೀ ಕೃಷ್ಣ ಭಟ್ ಇವರು ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಶಂಕರ ಭಜನಾ ಮಂಡಳಿ ಸದಸ್ಯರಿಂದ ಶ್ರೀ ಹರಿನಾರಾಯಣ ರಾವ್ ಅವರ ಮುಂದಾಳತ್ವದಲ್ಲಿ ಶ್ರೀ ಶಂಕರಾಚಾರ್ಯರ ಕಲ್ಯಾಣವೃಷ್ಟಿಸ್ತವ, ಶಂಕರಾಚಾರ್ಯರ ಅಷ್ಟೋತ್ತರ ಶತನಾಮಾವಳಿ ಹಾಗೂ ಶೃಂಗೇರಿಯ ಭಜನೆಗಳನ್ನು ಹಾಡಲಾಯಿತು. ಮಂಗಳಾರತಿಯ ಬಳಿಕ ತೀರ್ಥಪ್ರಸಾದ ನಂತರ ಎಲ್ಲರಿಗೂ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಉಪಸ್ಥಿತರಿದ್ದ ಎಲ್ಲರನ್ನು ಶ್ರೀಮತಿ ಪರಿಮಳ ಪ್ರಶಾಂತ್‌ರವರು ವಂದಿಸಿದರು.

# ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

## ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ ಗಂಟೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598


# ಮನೆಯೇ ಮಂತ್ರಾಲಯ

ಶ್ರೀಮತಿ ಸೌಜನ್ಯ ಮತ್ತು ಬೊಕ್ಕಸ ಶ್ರೀ ನಟೇಶ ರಾವ್ ಬೆಂಗಳೂರಿನ ಯಲಹಂಕ ನ್ಯೂಟೌನ್‌ನಲ್ಲಿ ನಿರ್ಮಿಸಿದ ನೂತನ ಮನೆ **'ಸದ್ವಿಜ'**ದ **ಗೃಹಪ್ರವೇಶ**ವು ತಾರೀಕು 19–5–2025ನೇ ಸೋಮವಾರ ನಡೆಯಿತು.








ಪತ್ರಿಕೆಗೆ ಶುಭ ಬಯಸುವ–



**Dr. Jayalakshmi Devi**
**Dr. Jaganmohan, Smt. Asha Mohan**
**Akarsh M. Rao**
**Konchadi, Mangalore - 575 008**



## ಪ್ರಕಟಣೆ

**ಸಮಾಜ ಬಾಂಧವರ ಗಮನಕ್ಕೆ,** ತಾ. : 11-04-2025

ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ವತಿಯಿಂದ ನೀಡಲಾಗುತ್ತಿರುವ **ಸಾಲ ವಿದ್ಯಾರ್ಥಿವೇತನ (Loan Scholarship) ಮತ್ತು ವಾರ್ಷಿಕ ವಿದ್ಯಾರ್ಥಿವೇತನ (General Scholarship)** ಅರ್ಜಿ ನಮೂನೆಯನ್ನು (Application Form) ಕೆಲ ಬದಲಾವಣೆಗಳೊಂದಿಗೆ ಪರಿಷ್ಕರಿಸಲಾಗಿದೆ.

**ಪರಿಷ್ಕೃತ ಅರ್ಜಿ ಪ್ರತಿಗಳು ಲಭ್ಯವಾಗುವ ಸ್ಥಳಗಳು**

**ಕಛೇರಿ :** ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು, ಸ್ಥಳೀಯ ಸ್ಥಾನಿಕ ಸಂಘಗಳ ಕಛೇರಿಗಳು, ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಎಲ್ಲಾ ಶಾಖೆಗಳು, ಶ್ರೀ ಸುಬ್ರಹ್ಮಣ್ಯ ಸಭಾದ ವೆಬ್‌ಸೈಟ್ : www.subramanyasabha.comನಿಂದ download ಮಾಡಬಹುದು.

**ಉದಯ ಕುಮಾರ್ ರಾವ್ ಪಿ.**
ಕಾರ್ಯದರ್ಶಿ ✆ : 9480328030

**ಡಾ. ಎ. ಪಿ. ಕೃಷ್ಣ**
ಅಧ್ಯಕ್ಷರು ✆ : 9845213997

## ಶ್ರೀ ಬಾಲಗಣಪತಿ – ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿ ಮಹೋತ್ಸವ



ದಿನಾಂಕ 2-05-2025ನೇ ಶುಕ್ರವಾರ ಸಂಜೆ ಪಡುಬಿದ್ರಿ ಶ್ರೀ ಬಾಲಗಣಪತಿ –ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು. ಶ್ರೀ ಶಂಕರಾಚಾರ್ಯರ ಅಷ್ಟೋತ್ತರ, ಸ್ತೋತ್ರಗಳು, ಶ್ರೀ ಲಲಿತಾಸಹಸ್ರನಾಮ, ಪಾರಾಯಣದೊಂದಿಗೆ ಶ್ರೀ ನಯನಾಭಿರಾಮಸ್ವಾಮಿ ಇವರು ಗುರುಗಳಿಗೆ ಮಂಗಳಾರತಿ ಮಾಡಿದರು. ಬಳಿಕ ಪ್ರಸಾದ ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು.

Prop: Somashekhar
Mob: 9844551244

**WONDER CREATION**
Decor & Event planners

Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography

2T-145-3A, Kulai Gudde Road, Kulai, Surathkal

Phone : 0824 - 2440110, 2213946

**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



**PRAVEEN KUMAR ADYAPADY**
NOTARY & ADVOCATE

MANGALORE OFFICE
JANVI PLAZA, IInd FLOOR
BUNTS HOSTEL, MANGALORE

BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

**'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003**

**ಶಾಖೆಗಳು ✆ : 9880968032 / 0824-2982095**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575

ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967

ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470

ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733

ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು
ವಿಶೇಷ ಬಡ್ಡಿದರ : **9.6%**

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
ಮತ್ತು **ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಾಲ ವಿದ್ಯಾರ್ಥಿವೇತನ ನಿಧಿ ಸ್ಥಾಪನೆ



ಮಂಗಳೂರು ಮಣ್ಣಗುಡ್ಡೆ ನಿವಾಸಿ ಶ್ರೀಮತಿ ಲಕ್ಷ್ಮಿ ಮತ್ತು ಶ್ರೀ ಬೋಳ ಗುಂಡೂರಾವ್ ಸ್ಮರಣಾರ್ಥ ಅವರ ಮಗಳು ಶ್ರೀಮತಿ ಇಂದುಮತಿ ಶಾಸ್ತ್ರಿ ಮತ್ತು ಅಳಿಯ ಶ್ರೀ ಸದಾಶಿವ ಶಾಸ್ತ್ರಿ ತಲಾ ರೂ. 1,00,000/– ನೀಡಿ ಒಟ್ಟು ರೂ. 2,00,000/–ದ ಸಾಲ ವಿದ್ಯಾರ್ಥಿವೇತನ ನಿಧಿಯನ್ನು ಶ್ರೀ ಸಭಾದಲ್ಲಿ ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

---

ಬೆಂಗಳೂರು ನಿವಾಸಿ ಶ್ರೀ ಕೆ. ಎಸ್. ವೆಂಕಟೇಶ್ ಇವರು ತಮ್ಮ ಸಂಸ್ಥೆಯಾದ ವರ್ಷ ಎಂಟರ್‌ಪ್ರೈಸಸ್‌ನ ಮೂಲಕ ತಮ್ಮ ತೀರ್ಥರೂಪರಾದ ಕುಡ್ವಿ ಸದಾಶಿವ ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಾಲ ವಿದ್ಯಾರ್ಥಿವೇತನ ನಿಧಿಯನ್ನು ಪ್ರತಿ ತಿಂಗಳು ರೂ. 15,000/– ಮೂಲಕ ಸ್ಥಾಪಿಸಿದ್ದು, 2024–2025ರ ಸಾಲಿನಲ್ಲಿ ರೂ. 1,80,000/– ನೀಡಿರುತ್ತಾರೆ. ಈ ಮೊದಲು ನೀಡಿದ ಮೊತ್ತ ರೂ. 14,40,000/– ಆಗಿದ್ದು, ಒಟ್ಟು ಮೊತ್ತ ರೂ. 16,20,000/– ಆಗಿರುತ್ತದೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು.

## ಪುತ್ತೂರಿನ ‘ಶಿವಸದನ’ಕ್ಕೆ ದೇಣಿಗೆ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ಸದನದ ಓರ್ವ ಶ್ರೇಯೋಭಿಲಾಷಿ ರೂ. 70,000/– ಮೊತ್ತದ ಹತ್ತು ಊಟದ ಟೇಬಲ್‌ಗಳನ್ನು ಪ್ರಾಯೋಜಿಸಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅವರಿಗೆ ಅನಂತಾನಂತ ಧನ್ಯವಾದಗಳು.

---

ಬ್ರಹ್ಮಶ್ರೀ ಕೆ. ಗುರುಪ್ರಸಾದ ರಾವ್ ಕಬ್ಬಿನಾಲೆ ಇವರು ಅವರ ಹಿರಿಯರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿನಿಲಯ ‘ಶಿವಸದನ’ಕ್ಕೆ ರೂ. 5,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

---



ಮಂಗಳೂರು ಬಾರೆಬೈಲ್ ನಿವಾಸಿ ಶ್ರೀಮತಿ ವೇದ ಮತ್ತು ಶ್ರೀ ಆನಂದ್ ಮೂವ್ವರ್ ದಂಪತಿಗಳು ಶ್ರೀ ಸಭಾ ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಶಕುಂತಲಾ ವಿ. ರಾವ್ ಪ್ರಯತ್ನದಿಂದ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ‘ಶಿವಸದನ’ಕ್ಕೆ ಒಂದು ಊಟದ ಟೇಬಲನ್ನು ದಾನವಾಗಿ ನೀಡಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಮಂಗಳೂರು ಚಿತ್ರಾಪುರ ನಿವಾಸಿ ಶ್ರೀಮತಿ ನಳಿನಿ ಮತ್ತು ಶ್ರೀ ಸಿ. ಆನಂದ ರಾವ್ ಹಾಗೂ ಅವರ ಮಕ್ಕಳು ಅವರ ಹಿರಿಯರಾದ ಶ್ರೀಮತಿ ಮೀನಾಕ್ಷಿ ಅಮ್ಮ ಮತ್ತು ಶ್ರೀ ಸಿ. ಪದ್ಮನಾಭಯ್ಯ ಸ್ಮರಣಾರ್ಥ ಸಾಲ ವಿದ್ಯಾರ್ಥಿವೇತನ ನಿಧಿಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಕಳೆದ ವರ್ಷ ರೂ. 1,45,000/– ನೀಡಿ ಸ್ಥಾಪಿಸಿದ್ದು, ಅದಕ್ಕೆ ಈ ವರ್ಷ ರೂ. 35,000/– ನೀಡಿ ಅದನ್ನು ರೂ 1,80,000/–ಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು. ಇದೇ ತಾರೀಕು 2–02–2025ರಂದು ನಡೆದ ‘ಸ್ಕಾಲರ್ಸ್ ಡೇ’ ದಿನದಂದು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ 114 ವಿದ್ಯಾರ್ಥಿಗಳಿಗೆ ಒಟ್ಟು ರೂ. 5,31,500/– ಸ್ಕಾಲರ್‌ಶಿಪ್ ವಿತರಿಸಲಾಗಿದೆ. ಇದರಲ್ಲಿ ವಿಶೇಷವಾಗಿ ವೇದ ಮತ್ತು ಸಂಸ್ಕೃತ ಕಲಿಕೆಯನ್ನು ಉತ್ತೇಜಿಸಲು ವಿದ್ಯಾರ್ಥಿವೇತನ ನೀಡಲಾಗಿದೆ. 70 ವಿದ್ಯಾರ್ಥಿಗಳಿಗೆ ರೂ. 71,80,000/– ಸಾಲ ವಿದ್ಯಾರ್ಥಿವೇತನ ನೀಡಲಾಗಿದೆ ಹಾಗೂ 11 ವಿದ್ಯಾರ್ಥಿಗಳಿಗೆ ರೂ. 1,80,000/– ಮೌಲ್ಯದ ಲ್ಯಾಪ್‌ಟಾಪನ್ನು ವಿತರಿಸಲಾಗಿದೆ.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ‘ಕಂಪ್ಯೂಟರ್ ಶಿಕ್ಷಣನಿಧಿ’ ಸ್ಥಾಪನೆ



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಮೂಲನಿಧಿಯಾಗಿ ರೂ. 1,10,000/–ವನ್ನು ದೇಣಿಗೆ ನೀಡಿ ‘ಕಂಪ್ಯೂಟರ್ ಶಿಕ್ಷಣ ನಿಧಿ’ಯನ್ನು ಸ್ಥಾಪಿಸಿದ್ದು, ಆ ನಿಧಿಯ ಮೊತ್ತವನ್ನು ಆಸಕ್ತ ಸಮಾಜ ಬಾಂಧವರ ನೆರವಿನಿಂದ ಕನಿಷ್ಠ ರೂ. 10 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವಿದ್ದು, ಇಂತಹ ಸಮಾಜಮುಖೀ ಕಾರ್ಯಕ್ಕೆ ಸಹಕರಿಸಿದವರು ಡಾ। ಜಯಲಕ್ಷ್ಮಿ ರಾವ್ ರೂ. 10,000/–, ಸಾಂತೂರು ಶ್ರೀ ಭಾಗ್ಯಚಂದ್ರ ರಾವ್ ರೂ. 1,00,000/–, ಶ್ರೀಮತಿ ರತ್ನ ರಾಜೇಂದ್ರ ರೂ. 5,000/– ಬಾಕಿ ಉಳಿದ ಮೊತ್ತ ರೂ. 7,65,000/– ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು.

ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ಯೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



**ಪಡುವರಿ ಕೃಷ್ಣಮೂರ್ತಿ** (77) ಕೋಟೇಶ್ವರ, ಕುಂದಾಪುರ ಇವರು ತಾ. 25-04-2025ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನರಾದರು. ಬೈಂದೂರಿನಲ್ಲಿ ಮತ್ತು ಉಡುಪಿ ಜಿಲ್ಲೆಯ ಹಲವಾರು ಶಾಲೆಗಳಲ್ಲಿ ಅಧ್ಯಾಪಕರಾಗಿ ಬೈಂದೂರಿನ ಸರ್ಕಾರಿ ಪಿ.ಯು. ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅವರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

●●●




**ಶ್ರೀಮತಿ ವೈ. ಶಾಂಭವಿ ರಾವ್** (82) ತಾ. 24-04-2025ನೇ ಗುರುವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ವಿಶ್ವಹಿಂದೂ ಪರಿಷತ್‌ನ ಹಿರಿಯ ಕಾರ್ಯಕರ್ತರಾಗಿದ್ದ ಕಾಪು ಮಾಡ್ಡೂರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಮಾಡ್ಡೂರು ಗ್ರಾಮದ ಪೂವಂದೂರು ನಿವಾಸಿ **ನಾರಾಯಣ ರಾವ್ ಪೂವಂದೂರು** (82) ಮಂಗಳವಾರ ನಿಧನರಾದರು. ಬಾಲ್ಯದಲ್ಲಿಯೇ ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದ ನಾರಾಯಣ ರಾವ್, ಕಾಪು ಮಾಡ್ಡೂರು ಗ್ರಾಮದಲ್ಲಿ ಜನಸಂಘ ಸ್ಥಾಪಿಸಿ, ಬೆಳೆಸಿದ್ದರು. ವಿಶ್ವಹಿಂದೂ ಪರಿಷತ್ ಸಂಘಟನೆಯಲ್ಲೂ ಕೆಲವೊಂದು ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದ ಅವರು ಪ್ರಗತಿಪರ ಕೃಷಿಕರಾಗಿದ್ದು, ಹವ್ಯಾಸಿ ನಾಟಕ ಕಲಾವಿದರಾಗಿಯೂ ಗುರುತಿಸಿಕೊಂಡಿದ್ದರು. ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿಯನ್ನು ಅಗಲಿದ್ದಾರೆ.

●●●



ಕರ್ಣಾಟಕ ಬ್ಯಾಂಕ್‌ನ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ನಿವೃತ್ತಿಯಾಗಿದ್ದ, ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರದ ಅನನ್ಯಸಾಧಕ **ನಂದಳಿಕೆ ಬಾಲಚಂದ್ರ ರಾವ್** (72) ಅವರು ಮೇ 14ರಂದು ಮಂಗಳೂರಿನ ಸ್ವಗೃಹದಲ್ಲಿ ನಿಧನಹೊಂದಿದರು. ಮೃತರು ಪತ್ನಿ, ಪುತ್ರಿಯನ್ನು ಅಗಲಿದ್ದಾರೆ.

ಕವಿ ಮುದ್ದಣನ ಹುಟ್ಟೂರಾದ ಕಾರ್ಕಳ ನಂದಳಿಕೆಯಲ್ಲಿ ಮುದ್ದಣ ಸ್ಮಾರಕ ಮಿತ್ರಮಂಡಲಿಯನ್ನು ಸ್ಥಾಪನೆ ಮಾಡಿ ಅದರ ಮೂಲಕ ಕವಿ ಮುದ್ದಣನನ್ನು ಶಾಶ್ವತವಾಗಿ ನೆನಪಿಸುವ ಹಲವು ಕಾರ್ಯಕ್ರಮಗಳನ್ನು ನಡೆಸಿದ್ದರು. ಕವಿ ಮುದ್ದಣನ ಸಮಗ್ರ ಕಾವ್ಯ ಸಂಪುಟ ಬಿಡುಗಡೆ, ಮುದ್ದಣ ಮನೋರಮೆಯರ ಸಂಭಾಷಣೆಯ ಡಿವಿಡಿ, ಹುಟ್ಟೂರಿನಲ್ಲಿ ಮುದ್ದಣನ ನೆನಪಿನ ಗ್ರಂಥಾಲಯ, ಮುದ್ದಣ ಸ್ಮಾರಕ, ಮುದ್ದಣನ ಯಕ್ಷಗಾನ ಸಂಪುಟಗಳು, ಪ್ರತೀ ವರ್ಷ ಕವಿ ಮುದ್ದಣ ದಿನಾಚರಣೆಯನ್ನು ಆಯೋಜಿಸುತ್ತಿದ್ದರು. ಮುದ್ದಣನ ಹೆಸರಿನಲ್ಲಿ ಅಂಚೆ ಚೀಟಿ, ನಾಣ್ಯ ಬಿಡುಗಡೆ, ನೂರಾರು ಸಾಹಿತ್ಯಿಕ ಕಾರ್ಯಕ್ರಮಗಳು, ಮುದ್ದಣ ಸ್ಮಾರಕ ಪ್ರಶಸ್ತಿಪೀಠ ಸ್ಥಾಪನೆ ಮಾಡಿದ್ದರು. ಮಂಗಳೂರು ವಿ.ವಿ.ಯಲ್ಲಿ ಕವಿಯ ನೆನಪಿನ ಅಧ್ಯಯನ ಪೀಠಕ್ಕಾಗಿ ಶ್ರಮಿಸಿದ್ದರು. ಕವಿ ಮುದ್ದಣನ ಕೃತಿಗಳನ್ನು ಮರುಮುದ್ರಿಸುವುದು, ಯಕ್ಷಗಾನ ಕೃತಿಗಳನ್ನು ಪ್ರಸ್ತುತಪಡಿಸುವುದು ಹಾಗೂ ದೃಶ್ಯ-ಶ್ರಾವ್ಯ ಮಾಧ್ಯಮಗಳಲ್ಲಿ ದಾಖಲಿಸುವುದು ಮುಂತಾದ ಸಾರಸ್ವತ ಸೇವೆಯನ್ನು ಅವರು ನಡೆಸಿದ್ದರು.

'ನಂದೊಳಿಗೆದ ಮುದ್ದಣೆ', 'ತೆಕ್ಕುಂಜ ಗೋಪಾಲಕೃಷ್ಣ ಭಟ್ಟ' ಎಂಬ ಕೃತಿ ರಚಿಸಿರುವ ಅವರು ವಿವಿಧ ಗ್ರಂಥಗಳ ಸಂಪಾದನೆ ನಡೆಸಿದ್ದರು. ಕಾಂತಾವರ ಕನ್ನಡ ಸಂಘದ ಸ್ಥಾಪಕ ಸಂಘಟನಾ ಕಾರ್ಯದರ್ಶಿಯಾಗಿ, ದೂರ ಸಂಪರ್ಕ ಇಲಾಖೆಯ ಸಲಹಾ ಸಮಿತಿಯಲ್ಲಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ವಿವಿಧ ಸಂಘ-ಸಂಸ್ಥೆಗಳು ಅವರ ಸೇವೆಯನ್ನು ಪರಿಗಣಿಸಿ ಸನ್ಮಾನಿಸಿದ್ದವು.

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿ ಮಹೋತ್ಸವ



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಾರೀಕು 2-05-2025ನೇ ಶುಕ್ರವಾರ, ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಹಾಗೂ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಸಮಿತಿ ಇವರ ಆಶ್ರಯದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಬ್ರಹ್ಮಕಲಶೋತ್ಸವದ ದಿನ ಮತ್ತು ಶ್ರೀ ಶಂಕರ ಜಯಂತಿ ಮಹೋತ್ಸವವನ್ನು ವಿದ್ಯುಕ್ತವಾಗಿ ಆಚರಿಸಲಾಯಿತು. ಬೆಳಿಗ್ಗೆ ದೇವರಿಗೆ ಪಂಚಾಮೃತ ಅಭಿಷೇಕ, ಪವಮಾನ ಕಲಶಾಭಿಷೇಕವನ್ನು ಹೆಜಮಾಡಿ ಕೃಷ್ಣರಾಜ ಭಟ್ ಇವರು ನಡೆಸಿದರು. ಅನಂತರ ದೇವರಿಗೆ ವಿಷ್ಣು ಸಹಸ್ರನಾಮಾರ್ಚನೆ, ಮಹಾಪೂಜೆ, ಶ್ರೀ ಶಂಕರಾಚಾರ್ಯರಿಗೆ ಅಷ್ಟೋತ್ತರ ಸಹಿತ ಕಲ್ಪೋಕ್ತ ಪೂಜೆಯನ್ನು ಶ್ರೀ ಸುಧಾಕರ್ ಬೆಳ್ಳೆ, ಮುಂಡ್ಕೂರು ಇವರು ನಡೆಸಿದರು. ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಮಹಿಳಾ ವೇದಿಕೆಯ ಸದಸ್ಯೆಯರು ವಿಷ್ಣು ಸಹಸ್ರನಾಮ ಪಾರಾಯಣ, ಶಂಕರಾಚಾರ್ಯರ ಅಷ್ಟೋತ್ತರ, ಸ್ತೋತ್ರಗಳು ಹಾಗೂ ಭಜನೆಗಳನ್ನು ಹಾಡಿದರು. ಶೃಂಗೇರಿ ಶಾಂಕರ ತತ್ವಪ್ರಸಾರದ ಉಡುಪಿ ಜಿಲ್ಲಾ ಸಂಚಾಲಕಿ ಶ್ರೀಮತಿ ಸವಿತಾ ಎರ್ಮಾಳ್ ಇವರು ಶಂಕರಾಚಾರ್ಯರ ತತ್ವಗಳ, ಸ್ತೋತ್ರಗಳ ಬಗ್ಗೆ ತಿಳಿಸುತ್ತಾ, ಅದರಲ್ಲೂ ಮಾತೃ ಪಂಚಕದ ಬಗ್ಗೆ ತಿಳಿಸಿ, ಈಗಿನ ಯುವ ಪೀಳಿಗೆಗೆ ಹೆತ್ತವರ, ಹಿರಿಯರ ಮಹತ್ವವನ್ನು ತಿಳಿಸುವಂತೆ ಹೇಳಿದರು. ಅವರಿಗೆ ದೇವರ ಪ್ರಸಾದ ನೀಡಿ ಗೌರವಿಸಲಾಯಿತು. ಅನ್ನಸಂತರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಶೃಂಗೇರಿಯಿಂದ ಕೊಡಲ್ಪಟ್ಟ ಗುರುಗಳ ಫೋಟೋಗಳನ್ನು ಸಮಾಜ ಬಾಂಧವರಿಗೆ ವಿತರಿಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಸುಮಾರು ನೂರಕ್ಕಿಂತಲೂ ಹೆಚ್ಚು ಮಂದಿ ಸಮಾಜ ಬಾಂಧವರು ಪಾಲ್ಗೊಂಡರು.

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ವಾರ್ಷಿಕೋತ್ಸವ ಕಾರ್ಯಕ್ರಮ




ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ವಾರ್ಷಿಕೋತ್ಸವ ಕಾರ್ಯಕ್ರಮವು ತಾರೀಕು 12-05-2025ನೇ ಸೋಮವಾರ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಯಿತು.

ಬೆಳಗ್ಗೆ ಗಂಟೆ 8-00ಕ್ಕೆ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಬಳಿಕ ಗಣಪತಿ ಹೋಮ, ಅಧಿವಾಸ ಹೋಮ, ಪಂಚಾಮೃತ ಅಭಿಷೇಕ, ಕಲಶಾಭಿಷೇಕ ನಡೆದು, ಮಧ್ಯಾಹ್ನ ಮಹಾಪೂಜೆಯು ನಡೆಯಿತು. ಬೆಂಗಳೂರಿನ ಶ್ರೀಮತಿ ಶೋಭಾ ಸುಬ್ರಹ್ಮಣ್ಯ ಶಾಸ್ತ್ರಿ ಇವರ ತುಲಾಭಾರ ಸೇವೆಯೂ ಸಂಪನ್ನಗೊಂಡಿತು. ಪಡುಬಿದ್ರಿ ಮತ್ತು ಉಡುಪಿ ಸ್ಥಾನಿಕ ಸಂಘದ ಸದಸ್ಯರು ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ಭಜನಾ ಸೇವೆಯನ್ನು ನಡೆಸಿಕೊಟ್ಟರು. ಬಳಿಕ ಭಕ್ತರಿಗೆ ಅನ್ನಸಂತರ್ಪಣೆಯು ನಡೆಯಿತು.

ಸಂಜೆ ಶ್ರೀ ವಿಷ್ಣುಮೂರ್ತಿ ದೇವರಿಗೆ ರಂಗಪೂಜೆ ಸೇವೆ ನಡೆಯಿತು. ಈ ಕಾರ್ಯಕ್ರಮಗಳಲ್ಲಿ ಸುಮಾರು 250ಕ್ಕೂ ಹೆಚ್ಚಿನ ಊರ-ಪರವೂರ ಭಕ್ತರು ಪಾಲ್ಗೊಂಡರು.



PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

PREETHIKA AUTOMOBILES
✆ 2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

# ಅಪಾರಕೀರ್ತಿ ಗಳಿಸಿ



ಎಲ್ಲೂರಿನ ಶ್ರೀ ಶಿವಾನಂದ ರಾವ್ ಮತ್ತು ಶ್ರೀಮತಿ ಸುಮಿತ್ರಾ ದಂಪತಿಗಳ ಪುತ್ರ **ಚಿ| ಸೌರಭ್ ರಾವ್** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 97.92 ಅಂಕಗಳನ್ನು ಪಡೆದಿದ್ದಾನೆ. ಇವನು ಮುದರಂಗಡಿಯ ಸೈಂಟ್ ಫ್ರಾನ್ಸಿಸ್ ಶಾಲೆಯ ವಿದ್ಯಾರ್ಥಿ.

— — —



ಎಲ್ಲೂರು ಕುಕ್ಕಿಕಟ್ಟೆ ಶ್ರೀಮತಿ ಸೌಮ್ಯಾ ರಾವ್ ಮತ್ತು ಶ್ರೀ ಎನ್. ಎಸ್. ಜಗದೀಶ್ ರಾವ್ ದಂಪತಿಗಳ ಪುತ್ರಿ **ಕು| ತನ್ವಿ** ಇವಳು ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 97.6 ಅಂಕಗಳನ್ನು ಪಡೆದಿದ್ದಾಳೆ. ಇವಳು ಮುದರಂಗಡಿ ಸೈಂಟ್ ಫ್ರಾನ್ಸಿಸ್ ಶಾಲೆಯ ವಿದ್ಯಾರ್ಥಿನಿ.

— — —




ಪಡುಬಿದ್ರಿ – ಪಾದೆಬೆಟ್ಟಿನ ಶ್ರೀ ಶ್ರೀನಿವಾಸ್ ಶರ್ಮ ಮತ್ತು ಶ್ರೀಮತಿ ಚೇತನ ದಂಪತಿಗಳ ಪುತ್ರಿ **ಕು| ವೈಷ್ಣವಿ ಶರ್ಮ** ಇವರು ಈ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 97.28 ಅಂಕಗಳನ್ನು ಪಡೆದಿದ್ದಾಳೆ. ಇವಳು ಪಡುಬಿದ್ರಿ ಸಾಗರ ವಿದ್ಯಾ ಮಂದಿರದ ವಿದ್ಯಾರ್ಥಿನಿ.

— — —



**ಕು| ಅದಿತಿ** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ. 92 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಅವಳು ಮಂಗಳೂರಿನ ಶ್ರೀ ಕೃಷ್ಣಪ್ರಸಾದ್ ಎಚ್.ಎಲ್. ಮತ್ತು ಶ್ರೀಮತಿ ಅಶ್ವಿನಿ ಪ್ರಸಾದ್ ಇವರ ಪುತ್ರಿ.

— — —



ಬೆಂಗಳೂರಿನ ಶ್ರೀ ಕಿಶೋರ್ ಎಂ. ಕೆ. ಮತ್ತು ಚೈತ್ರರವರ ಪುತ್ರ **ಚಿ| ತನಯ್** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ. 91.8 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.



**ಕು| ಲಕ್ಷ್ಯ ರಾವ್** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ 96.2 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಅವಳು ಶ್ರೀ ಶಶಿಕಾಂತ ರಾವ್ ಮತ್ತು ಶ್ರೀಮತಿ ರೂಪಶ್ರೀ ಇವರ ಪುತ್ರಿ.

— — —



ಶ್ರೀ ಮಹೇಶ್ ಮಡಿಯಾಳ ಮತ್ತು ಶ್ರೀಮತಿ ಸ್ವಪ್ನರವರ ಪುತ್ರ **ಚಿ| ಸಮರ್ಥ ಮಡಿಯಾಳ** ಈ ಬಾರಿಯ 12ನೇ ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ. 95.4 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.

— — —



**ಚಿ| ಯಶವರ್ಧನ ರಾವ್** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ 94.4 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಅವನು ಬೆಂಗಳೂರಿನ ಶ್ರೀ ಅಶ್ವಿಜ ರಾವ್ ಮತ್ತು ಶ್ರೀಮತಿ ಸವಿತಾ ಇವರ ಪುತ್ರ.

— — —



**ಕು| ಅನಿಕಾ ರಾವ್** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ. 93.2 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಅವಳು ಬೆಂಗಳೂರಿನ ಶ್ರೀ ವಸಂತ ರಾವ್ ಮತ್ತು ಶ್ರೀಮತಿ ಸುಮಿತಾ ರಾವ್ ಇವರ ಪುತ್ರಿ.

— — —



ಡಾ. ಹರಿಕೇಶ ಮತ್ತು ಡಾ. ಮೋನಿಕಾರವರ ಸುಪುತ್ರ **ಚಿ| ಅದ್ವೈತ** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ. 92 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.

— — —



ಬೆಂಗಳೂರಿನ ಶ್ರೀ ನಿಶಾಂತ ರಾವ್ ಮತ್ತು ಶ್ರೀಮತಿ ಗೀತಾ ರಾವ್ ಇವರ ಸುಪುತ್ರಿ **ಕು| ನಿಖಿತಾ ರಾವ್** ಈ ಬಾರಿಯ 10ನೇ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ ಶೇ. 89.5 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

## ಶುಭವಿವಾಹ

ಪೆರ್ಡೂರು ಶ್ರೀ ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಎಸ್. ನಾಗವಲ್ಲಿ ಇವರ ಸುಪುತ್ರ **ಚಿ| ಹರಿಪ್ರಸಾದ್ ಎಸ್. ರಾವ್** ಮತ್ತು ನಂದಳಿಕೆ ಶ್ರೀ ರಮೇಶ ರಾವ್ ಮತ್ತು ಶ್ರೀಮತಿ ಜ್ಯೋತಿ ಇವರ ಸುಪುತ್ರಿ **ಚಿ| ಸೌ| ಇಂಚರ** ಇವರ ವಿವಾಹ ಮಹೋತ್ಸವವು ತಾ. 09–05–2025ನೇ ಶುಕ್ರವಾರ ನಂದಳಿಕೆ 'ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಕಲ್ಯಾಣ ಮಂಟಪ'ದಲ್ಲಿ ನಡೆಯಿತು.

❖❖❖

ಕಾಸರಗೋಡು ಪೆರ್ಲದ ಶ್ರೀ ರಾಜೇಂದ್ರ ಬಿ. ಮತ್ತು ಶ್ರೀಮತಿ ರಾಜಲಕ್ಷ್ಮಿಯವರ ಪುತ್ರ **ಚಿ| ನವನೀಶ ಕುಮಾರ ಬಿ.** ಹಾಗೂ ಪಡುಬಿದ್ರಿ ಶ್ರೀ ರಾಜೇಂದ್ರ ಮತ್ತು ಶ್ರೀಮತಿ ಗಾಯತ್ರಿ ಇವರ ಪುತ್ರಿ **ಚಿ| ಸೌ| ರಶ್ಮಿ** ಇವರ ವಿವಾಹವು ತಾರೀಕು 19–5–2025ನೇ ಸೋಮವಾರ 'ಎರ್ಮಾಳ ರಾಜರಾಜೇಶ್ವರಿ ಸಭಾಂಗಣ'ದಲ್ಲಿ ನಡೆಯಿತು.

❖❖❖

ಶ್ರೀ ಶಶಿಧರ ಹೆಬ್ಬಾರ್ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀಯವರ ಪುತ್ರ **ಚಿ| ಭರತ್ ಎಸ್.** ಹಾಗೂ ದಿ| ಡಾ. ಪ್ರದೀಪ್ ಕುಮಾರ್ ಮತ್ತು ಶ್ರೀಮತಿ ರೇಖಾರವರ ಪುತ್ರಿ **ಸೌ| ಪ್ರತೀಕ್ಷಾ** ಇವರ ವಿವಾಹವು ತಾರೀಕು 16–5–2025ನೇ ಶುಕ್ರವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಂಗಣ'ದಲ್ಲಿ ನಡೆಯಿತು.

❖❖❖

ಡಾ. ಕಿಶೋರ್ ಕುಮಾರ್ ರಾವ್ ಸಾಂತೂರ್ ಮತ್ತು ಶ್ರೀಮತಿ ಅನುರಾಧಾ ಇವರ ಪುತ್ರ **ಚಿ| ರೋಹಿತ್** ಹಾಗೂ ಪರೀಕ ಮುರಳೀಧರ್ ಶ್ಯಾನುಭಾಗ್ ಮತ್ತು ಶ್ರೀಮತಿ ವಾಣಿಶ್ರೀ ಇವರ ಪುತ್ರಿ **ಚಿ| ಸೌ| ವೈಷ್ಣವಿ** ಇವರ ವಿವಾಹವು ತಾ. 17–5–2025ನೇ ರವಿವಾರ ಉಡುಪಿಯ 'ಶ್ರೀ ಶಾರದಾ ಮಂಟಪ'ದಲ್ಲಿ ನಡೆಯಿತು.

## ಉಪನಯನ

ಚೆಂಡುಕಳ ಶ್ರೀ ಅಶೋಕ ಮತ್ತು ಶ್ರೀಮತಿ ನಮಿತ ಇವರ ಪುತ್ರ **ಚಿ| ಅಭಿನವ್** ಇವನ ಉಪನಯನ ಸಮಾರಂಭವು ತಾರೀಕು 19–5–2025ನೇ ಸೋಮವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಂಗಣದಲ್ಲಿ ನಡೆಯಿತು.

ಶ್ರೀ ಕೌಶಲ್ ಜೋಷಿ ಮತ್ತು ಶ್ರೀಮತಿ ವಿನೀತ ಜೋಷಿ ಇವರ ಸುಪುತ್ರ **ಚಿ| ದಕ್ಷ** ಇವನ ಉಪನಯನ ಸಮಾರಂಭವು ತಾರೀಕು 4–5–2025ನೇ ರವಿವಾರ ಬೆಂಗಳೂರಿನ 'ಬಾಲನ್ ಆರ್ಕೆಡ್'ನಲ್ಲಿ ನಡೆಯಿತು.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

NAVADURGA FINANCIALS
Estd 1998
SCAN ME TO KNOW MORE!!!

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



*We undertake all types of Electrical, Plumbing and Sanitary works*

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಶ್ರೀ ಶಂಕರ ಜಯಂತಿ'








ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 10–5–2025ನೇ ಶನಿವಾರ ಸಂಜೆ 'ಶಂಕರ ಜಯಂತಿ' ಪ್ರಯುಕ್ತ ಶ್ರೀ ದುರ್ಗಾ ಪೂಜೆಯನ್ನು ವೇದಮೂರ್ತಿ ಹೆಜಮಾಡಿ ಕೃಷ್ಣರಾಜ್ ಭಟ್ ಪೌರೋಹಿತ್ಯದಲ್ಲಿ, ಶ್ರೀ ಸುಬ್ರಹ್ಮಣ್ಯ ಸಭಾ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಮತ್ತು ಶ್ರೀಮತಿ ಸುಮನ ಕೃಷ್ಣ ದಂಪತಿಗಳ ಯಜಮಾನತ್ವದಲ್ಲಿ ಹಾಗೂ ಗಣ್ಯರ ಉಪಸ್ಥಿತಿಯಲ್ಲಿ ಪ್ರಾರ್ಥನೆಯೊಂದಿಗೆ ಆರಂಭಿಸಲಾಯಿತು. ಬಳಿಕ ಶ್ರೀ ಲಲಿತಾ ಸಹಸ್ರನಾಮ, ಶಂಕರ ಅಷ್ಟೋತ್ತರ, ಕಲ್ಯಾಣವೃಷ್ಟಿ ಪಾರಾಯಣಗಳು ಹಾಗೂ ಶ್ರೀ ಶಾರದಾಂಬಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಮುಂದೆ ಶ್ರೀ ಪ್ರವೀಣ್‌ಚಂದ್ರ ಶರ್ಮ ಇವರು ತಮ್ಮ ಧಾರ್ಮಿಕ ಉಪನ್ಯಾಸದಲ್ಲಿ ಶಂಕರ ಭಗವತ್ಪಾದರ ಜೀವನಚರಿತ್ರೆ ಮತ್ತು ಅವರ ತತ್ವ, ಭಾಷ್ಯಗಳ ಸಾರವನ್ನು ಸರ್ವರಿಗೂ ಅರ್ಥವಾಗುವಂತೆ ನುಡಿದರು. ಅವರನ್ನು ಶ್ರೀ ಸಭಾದ ಪದಾಧಿಕಾರಿಗಳು ಗೌರವಿಸಿದರು. ಶ್ರೀ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಉಪನ್ಯಾಸಕರನ್ನು ಸಭೆಗೆ ಪರಿಚಯಿಸಿದರೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸಭಾ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಫೋಟೋ ಮತ್ತು ವೀಡಿಯೊ ನೀಡಿ ಸಹಕರಿಸಿದರು. ಶ್ರೀ ಸಭಾ ಕಾರ್ಯದರ್ಶಿ ಶ್ರೀ ಉದಯಕುಮಾರ್ ಪಿ., ಯುವವೇದಿಕೆ ಅಧ್ಯಕ್ಷ ಶ್ರೀ ಜನಕರಾಜ್, ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಶಕುಂತಲಾ ವಿ. ರಾವ್, ಸಭಾದ ಇತರ ಪದಾಧಿಕಾರಿಗಳು, ನಿರ್ದೇಶಕರು, ಸದಸ್ಯರು ಎಲ್ಲಾ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಮಹಾಮಂಗಳಾರತಿ, ಪ್ರಸಾದ ವಿತರಣೆ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.



*ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್*

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಇವರ ಸಹಭಾಗಿತ್ವದಲ್ಲಿ ಶ್ರೀ ಮನೋಹರ ರಾವ್ ಅವರ ಪ್ರಾಯೋಜಕತ್ವದಲ್ಲಿ 'ಶ್ರೀ ಶಂಕರ ಜಯಂತಿ ಆಚರಣೆ'



ದಿನಾಂಕ 10–5–2025ನೇ ಶನಿವಾರ ಅಪರಾಹ್ನ ಗಂಟೆ 2–30ರಿಂದ ಸಾಯಂಕಾಲ 6–00 ಗಂಟೆಯ ತನಕ ಶ್ರೀ ಮನೋಹರ್ ರಾವ್ ಮತ್ತು ಶ್ರೀಮತಿ ಸಾವಿತ್ರಿ ಮನೋಹರ್ ರಾವ್ ಇವರ ಮನೆ 'ವಾಸುಕಿ'ಯಲ್ಲಿ 'ಶ್ರೀ ಶಂಕರ ಜಯಂತಿ ಮಹೋತ್ಸವ'ವು ಶ್ರೀ ಶಂಕರ ಪ್ರತಿಷ್ಠಾನ, ಕಾರ್ಕಳ ಮತ್ತು ಶ್ರೀ ಮನೋಹರ್ ರಾವ್ ದಂಪತಿಗಳ ಜಂಟಿ ಆಶ್ರಯದಲ್ಲಿ ಶ್ರೀ ಯಾಜಿ ನಿರಂಜನ್ ಭಟ್ ಇವರ ಪ್ರಧಾನ ಪೌರೋಹಿತ್ಯದ ಮಾರ್ಗದರ್ಶನದಿಂದ ನಡೆಯಿತು. ಆರಂಭದಲ್ಲಿ ಶ್ರೀ ಶಂಕರ ಪ್ರತಿಷ್ಠಾನದ ಮಹಿಳಾ ಭಜನಾ ತಂಡದವರಿಂದ ಶ್ರೀ ಶ್ರೀ ಗುರುಗಳ ಸಂಕೀರ್ತನೆಯು ಸುಶ್ರಾವ್ಯವಾಗಿ ನಡೆಯಿತು. ತದನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯನ್ನು ಪಡೆದ ವಿದ್ಯಾರ್ಥಿಗಳಾದ ಕು। ಸಾನಿಧ್ಯ ಮತ್ತು ಕು। ಅದಿತಿ ಉಭಯ ಇವರನ್ನು ಶ್ರೀಮತಿ ಸಾವಿತ್ರಿ ಮನೋಹರ್ ದಂಪತಿಗಳು ಅವರ ವತಿಯಿಂದ ಸನ್ಮಾನಿಸಿ ಅಭಿನಂದಿಸಿದರು. ಅನಂತರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಶ್ರೀ ನಟರಾಜ್ ರಾವ್ ಇವರಿಂದ ಶ್ರೀ ಶ್ರೀ ಶಂಕರ ಜಯಂತಿ ಬಗ್ಗೆ ಉಪನ್ಯಾಸವು ನೆರೆದ ಸಮಾಜ ಬಾಂಧವರಿಂದ ಪ್ರಶಂಸೆಗೆ ಪಾತ್ರವಾಯಿತು.

ಶ್ರೀ ನಟರಾಜ್ ಅವರನ್ನು ಶ್ರೀ ಮನೋಹರ್ ರಾವ್ ದಂಪತಿಗಳು ಹಾಗೆಯೇ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಯಾಜಿ ನಿರಂಜನ್ ಭಟ್ ಇವರನ್ನು ಸನ್ಮಾನಿಸಿ ಆಶೀರ್ವಾದ ಪಡೆಯಲಾಯಿತು. ಕೊನೆಯಲ್ಲಿ ಸಂಪೂರ್ಣ ಪ್ರಾಯೋಜಕತ್ವವನ್ನು ವಹಿಸಿ, ಎಲ್ಲಾ ಸದಸ್ಯರುಗಳಿಗೆ ಉಪಾಹಾರವನ್ನು ನೀಡಿದ ಶ್ರೀ ಮನೋಹರ್ ರಾವ್ ಮತ್ತು ಶ್ರೀಮತಿ ಸಾವಿತ್ರಿ ಮನೋಹರ್ ಇವರುಗಳನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಶೃಂಗೇರಿ ಮಠದಿಂದ ಒದಗಿಸಲಾದ ಶ್ರೀ ಶ್ರೀ ಆದಿಶಂಕರರ ಫೋಟೋ, ಶ್ರೀಮತಿ ಸಾವಿತ್ರಿ ಮನೋಹರ್ ದಂಪತಿಗಳು ನೀಡಿದ ಶಾಲನ್ನು ಎಲ್ಲರಿಗೂ ವಿತರಿಸಲಾಯಿತು. ಈ ಸಂದರ್ಭ ವೇದಿಕೆಯಲ್ಲಿ ಅಧ್ಯಕ್ಷರಾದ ಶ್ರೀ ಕೇಶವ್ ರಾವ್, ಶ್ರೀ ಮನೋಹರ್ ರಾವ್, (ವಿ. ಸಂಚಾಲಕರು) ಶ್ರೀಮತಿ ಸಾವಿತ್ರಿ ಮನೋಹರ್ ರಾವ್ (ಉಪಾಧ್ಯಕ್ಷರು) ಶ್ರೀ ಯಾಜಿ ನಿರಂಜನ್ ಭಟ್, ಶ್ರೀ ನಟರಾಜ್ ಪರ್ಕಳ, ಪ್ರಧಾನ ಕಾರ್ಯದರ್ಶಿ ಶ್ರೀ ಸತೀಶ್ ರಾವ್ ಕರ್ವಾಲು, ಕ್ಯಾಪ್ಟನ್ ಶ್ರೀ ಅಶ್ವಿನ್ ಎಮ್. ರಾವ್, ಅವರ ಪತ್ನಿ, ಮಕ್ಕಳು (ಶ್ರೀಮತಿ ಸಾವಿತ್ರಿ ಮನೋಹರ್ ಇವರ ಪುತ್ರ, ಸೊಸೆ, ಮೊಮ್ಮಕ್ಕಳು) ಉಪಸ್ಥಿತರಿದ್ದರು. ಸಂಘದ ಎಲ್ಲಾ ವಿಭಾಗದ ಅಧ್ಯಕ್ಷರುಗಳು, ನಿಕಟಪೂರ್ವ ಅಧ್ಯಕ್ಷರು, ವಿವಿಧ ನಿಧಿಗಳ ಸಂಚಾಲಕರು, ಎಲ್ಲಾ ವಿಭಾಗದ ಕಾರ್ಯದರ್ಶಿಗಳು, ಸಾಂಸ್ಕೃತಿಕ ಕಾರ್ಯದರ್ಶಿ, ಕೋಶಾಧಿಕಾರಿ, ಇತರೆ ಎಲ್ಲಾ ಸದಸ್ಯರುಗಳು ಸಹಕರಿಸಿದರು. ಶ್ರೀ ಭವಾನಿಶಂಕರ ರಾವ್ ಇವರ ಮಗಳು ಶ್ರೀಮತಿ ಶ್ರುತಿ ಅವರ ಮಗು ಬಾಲಶಂಕರನಾಗಿ ಎಲ್ಲರಿಂದಲೂ ಅಭಿನಂದಿಸಲ್ಪಟ್ಟಿತು. ಶ್ರೀ ಸತೀಶ್ ರಾವ್ ಕರ್ವಾಲು (ಪ್ರಧಾನ ಕಾರ್ಯದರ್ಶಿ) ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಶರ್ಮ ಧನ್ಯವಾದವಿತ್ತರು.

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಬೆಂಗಳೂರು ನಿವಾಸಿ ನಿವೃತ್ತ ಸ್ಟೇಟ್ ಬ್ಯಾಂಕ್ ಅಧಿಕಾರಿ **'ಬಪ್ಪನಾಡು ಶ್ರೀ ಸೋಮಶೇಖರ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮಿ ರಾವ್' ಇವರ ಸ್ಮರಣಾರ್ಥ** ಅವರ ಐವರು ಪುತ್ರಿಯರು (ಪಂಚತಾರಾ) ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ **1,00,000/-** (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿರುತ್ತಾರೆ. ಇವರು ಪ್ರತಿವರ್ಷವೂ 'ಶಿವಸದನ'ಕ್ಕೆ ದೇಣಿಗೆ ನೀಡುತ್ತಿದ್ದು, ಈ ಮೊದಲೇ ₹ **60,000/-**ವನ್ನು ನೀಡಿದ್ದು, ಒಟ್ಟು ₹ **1,60,000/-** ಮೊತ್ತವನ್ನು ದೇಣಿಗೆ ನೀಡಿದಂತಾಗಿದೆ. ಅಲ್ಲದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.





Spectacular Arabian Sea-View.
Spacious 3&4 BHK Apartments with Modern Amenities.
100% Vaastu Compliance.

CRISIL Real Estate DA2 Developer Gradings | IGBC | CREDAI MANGALORE

8882 777 444
98807 42159 | 98450 84866 | 9611531026

sales@landtrades.in | www.landtrades.in

**Office** : Milestone25", 5th Floor, Collectors Gate Junction, Balmatta, Mangalore, Karnataka

PRISTINE
IN HARMONY WITH PURITY

CHILIMBI


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


***Publisher :*** *Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
***Editor :*** *Sri M. S. Raghunath Rao, Darbe, Puttur* ***Printed at :*** *Rajesh Power Press, Darbe - 574 202, Puttur, D. K.*